## ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

### ಪತ್ರಿಕಾ ಪ್ರಕಟಣೆ

ವೃತ್ತಿನಿರತ ಪತ್ರಕರ್ತರ ಹಾಗೂ ಇತರೆ ವೃತ್ತ ಪತ್ರಿಕೆಗಳ ನೌಕರರ (ಸೇವಾ ಷರತ್ತುಗಳು) ಮತ್ತು ಇತರೆ ಪ್ರಾವದಾನಗಳ ಕಾಯ್ದೆ 1955 {(The Working Journalists and Other Newspaper Employees (Conditions of Services) and Miscellaneous Provisions Act-1955}, ರಡಿಯಲ್ಲಿ ಕೇಂದ್ರ ಸರಕಾರವು 2010 ರಲ್ಲಿ ನೇಮಿಸಲಾದ ನ್ಯಾಯಮೂರ್ತಿ ಮಜೀಥಿಯಾ ವೇತನ ಮಂಡಳಿಯು ತನ್ನ ಶಿಫಾರಸ್ಸುಗಳನ್ನು ಭಾರತ ಸರ್ಕಾರಕ್ಕೆ ದಿನಾಂಕ: 31-12-2010 ರಂದು ಸಲ್ಲಿಸಿರುತ್ತದೆ. ಭಾರತ ಸರ್ಕಾರವು ದಿನಾಂಕ: 11-11-2011 ರಿಂದ ಅನ್ವಯವಾಗುವಂತೆ, ಸದರಿ ಮಂಡಳಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಈಗಾಗಲೇ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಭಾರತ ಸರ್ಕಾರದ ಸದರಿ ಅಧಿಸೂಚನೆಯು ಸಂವಿಧಾನಬದ್ಧವಾಗಿದೆ ಎಂದು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 07-02-2012 ರಂದು ತನ್ನ ತೀರ್ಪನ್ನು ನೀಡಿರುತ್ತದೆ. ಆದುದರಿಂದ ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹರಾದ ವೃತ್ತಿನಿರತ ಪತ್ರಕರ್ತರು ಹಾಗೂ ಇತರೆ ವೃತ್ತ ಪತ್ರಿಕೆಗಳ ನೌಕರರು, ಭಾರತ ಸರ್ಕಾರವು ದಿನಾಂಕ:11-11-2011 ರಂದು ಹೊರಡಿಸಿರುವ ಅಧಿಸೂಚನೆ ಅನ್ವಯ ವೇತನ ಮತ್ತು ಇತರೆ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಯಾವುದೇ ಅರ್ಹರಾದ ವೃತ್ತಿನಿರತ ಪತ್ರಕರ್ತರು ಹಾಗೂ ಇತರೆ ವೃತ್ತ ಪತ್ರಿಕೆಗಳ ನೌಕರರು, ತಮಗೆ ವೇತನ ಮತ್ತು ಇತರ ಸೌಲಭ್ಯಗಳ ನೀಡಿಕೆಯಲ್ಲಿ ಯಾವುದೇ ತಾರತಮ್ಯ/ವ್ಯತ್ಯಾಸಗಳಾಗಿದ್ದಲ್ಲಿ, ಅವರು ತಮ್ಮ ಲಿಖಿತ ದೂರನ್ನು/ಮನವಿಯನ್ನು ಸಂಪೂರ್ಣ ಮಾಹಿತಿ ಹಾಗೂ ದಾಖಲೆಗಳೊಂದಿಗೆ, ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029 ಇವರಿಗೆ ಖುದ್ದಾಗಿಯಾಗಲಿ ಅಥವಾ ಅಂಚೆ ಮೂಲಕವಾಗಲಿ ಅಥವಾ ಇ-ಮೇಲ್ (email I.D: labour.commissioner42@gmail.com ಅಥವಾ jointlabourcommissioner@yahoo.com) ಮೂಲಕವಾಗಲಿ ಸಲ್ಲಿಸಬಹುದಾಗಿದೆ.

ಆದುದರಿಂದ ಬಾಧಿತರು ತಮ್ಮ ಅಹವಾಲನ್ನು/ದೂರನ್ನು/ಮನವಿಯನ್ನು ಕಾರ್ಮಿಕ ಆಯುಕ್ತರಿಗೆ ಸಲ್ಲಿಸುವ ಮೂಲಕ ಕಾಯ್ದೆ/ನಿಯಮಗಳನ್ವಯ ಪರಿಹಾರ ಪಡೆದುಕೊಳ್ಳಲು ಈ ಮೂಲಕ ಅವಕಾಶವನ್ನು ನೀಡಲಾಗಿರುತ್ತದೆ. ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗುವ ದೂರು/ಅಹವಾಲುಗಳ ಸತ್ಯಾಸತ್ಯತೆಯ ಬಗ್ಗೆ ನಿಯಮಾನುಸಾರವಾಗಿ ಪರಿಶೀಲಿಸಿ, ಅಗತ್ಯ ಕ್ರಮ ವಹಿಸಲಾಗುತ್ತದೆಂದು ಈ ಮೂಲಕ ತಿಳಿಸಲಾಗಿದೆ.

ದಿನಾಂಕ: 17 -09-2016

ಸ್ಥಳ: ಬೆಂಗಳೂರು:

ಕಾರ್ಮಿಕ ಆಯುಕ್ತರು,